**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 30/2022**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ಪಿಡಬ್ಲ್ಯೂ.01**

**ದಿನಾಂಕಃ 21.11.2024**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಇ ಎಂ ವಕೀಲರಿಂದಃ**

ನನಗೂ ಮತ್ತು ನಮ್ಮ ಮಾವ ಆರೋಪಿ ಅವರೊಂದಿಗೆ ಹಣದ ವ್ಯವಹಾರ ಆದ ನಂತರ ನಾನು ನೀಡಿದ ನೊಟೀಸ್ ಆಧಾರದ ಮೇಲೆ ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. ದಿಃ 08.06.2021 ಕ್ಕೆ ಆರೋಪಿ ನಮ್ಮ ಮನೆಯಲ್ಲಿ ನನ್ನ ಬಳಿ 5 ಲಕ್ಷ ರೂ ಹಣ ಪಡೆದುಕೊಂಡ ಬಗ್ಗೆ ಯಾವುದೇ ಲಿಖಿತ ಒಪ್ಪಂದ ಮಾಡಿಕೊಂಡಿಲ್ಲ. ನಿಪಿ. 2 ಮತ್ತು 4 ನೊಟೀಸನಲ್ಲಿ ಹಣವನ್ನು ನಗದು ರೂಪದಲ್ಲಿ ನೀಡಿದ್ದೇನೆ ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿಯು ಅದರಲ್ಲಿ ನಮೂದಿಸಿಲ್ಲ ಎಂದು ನುಡಿಯುತ್ತಾರೆ. ನಿಪಿ.2 ಮತ್ತು 4 ನೋಟಿಸನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಅದೇ ರೀತಿ ನನ್ನ ಮುಖ್ಯ ವಿಚಾರಣೆಯಲ್ಲಿ ಹಾಗೂ ಪಿರ್ಯಾದಿ ಅರ್ಜಿಯಲ್ಲಿ ಹಣವನ್ನು ನಗದು ರೂಪದಲ್ಲಿ ನೀಡಿದ ಬಗ್ಗೆ ಹೇಳಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಹಣವನ್ನು ನಗದು ರೂಪದಲ್ಲಿ ನೀಡಿದ ಬಗ್ಗೆ ವಕೀಲರಿಗೆ ಹೇಳಿರುತ್ತೇನೆ. ಈ ಬಗ್ಗೆ ಹೆಚ್ಚುವರಿ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆರೋಪಿ 2 ತಿಂಗಳ ಒಳಗಾಗಿ ಹಣವನ್ನು ಮರುಪವತಿ ಮಾಡದೇ ಇದ್ದಾಗ ನೊಟೀಸನ್ನು ನೀಡಿದ್ದೀರಾ ಎಂದರೆ ಸಾಕ್ಷಿಯು ಮೌಖಿಕವಾಗಿ ಕೇಳಿದ್ದೇನೆ ಎಂದು ನುಡಿಯುತ್ತಾರೆ. ದಿಃ 16.09.2021 ರಂದು ಸಾಲವನ್ನು ಕೇಳಿದ್ದೇನೆ ಎಂದು ನನ್ನ ಪಿರ್ಯಾದಿಯಲ್ಲಿ ಬರೆಸಿದ್ದೇನೆ. ಈ ರೀತಿ ಸೃಷ್ಟಿ ಮಾಡಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 16.09.2021 ರಂದು ನಾನು ಆರೋಪಿಯನ್ನು ನೇರವಾಗಿ ಅದೇ ದಿನದ ದಿನಾಂಕವನ್ನುನಮೂದಿಸಿ ಚೆಕ್ ನ್ನು ನೀಡು ಎಂದು ನಾನು ಕೇಳಿಲ್ಲ. ಒಂದು ವೇಳೆ ನನ್ನ ಮತ್ತು ಆರೋಪಿಯನಡುವೆ ವ್ಯವಹಾರ ಆಗಿದ್ದರೆ ನಾನು ಈ ರೀತಿ ಕೇಳುತ್ತಿದ್ದೆ, ಅಂತಹ ಯಾವುದೇ ವ್ಯವಹಾರ ಆಗಿಲ್ಲದ ಕಾರಣ ನಾನು ಈ ರೀತಿ ಕೇಳಿಲ್ಲ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ದಿನಾಂಕ, ಹೆಸರು ಮತ್ತು ಮೊತ್ತವನ್ನು ನಮೂದಿಸಿ ಚೆಕ್ ನ್ನು ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನೊಟೀಸನ್ನಾಗಲೀ, ಪಿರ್ಯಾದಿಯಲ್ಲಾಗಲಿ ಅಥವಾ ಮುಖ್ಯ ವಿಚಾರಣೆಯಲ್ಲಾಗಲೀ ನಿಪಿ.1 ನ್ನು ಆರೋಪಿಯೇ ಭರ್ತಿ ಮಾಡಿ ಕೊಟ್ಟಿದ್ದಾರೆ ಎಂದು ಬರೆಸಿಲ್ಲ ಎಂದರೆ ಸರಿ. ಸದರಿ ಚೆಕ್ ನಂ. 406850 ಎಂದರೆ ಸರಿ. ಸದರಿ ಚೆಕ್ ಆರೋಪಿ ಮೊದಲ ಬಾರಿ ನೀಡಿದ ಚೆಕ್ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಚೆಕ್ ನಂ. 406858 ನ್ನು ಮೊದಲು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ದಿಃ 16.09.2021 ಕ್ಕಿಂತ ಮುಂಚೆಯೇ ಚೆಕ್ ನಂ. 406858 ನನ್ನ ಬಳಿ ಇತ್ತು ಎಂದರೆ ಸರಿ. ಚೆಕ್ ನಂ. 406858 ನ್ನು ದಿಃ 08.10.2021 ಎಂದು ನಮೂದು ಮಾಡಿ ಕೊಟ್ಟಿದ್ದರು. ನಿಪಿ 1 ರಲ್ಲಿರುವ ದಿಃ 13.10.2021 ಎಂದು ದಿನಾಂಕವನ್ನು ಸೃಷ್ಟಿ ಮಾಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ